ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 41 ಮತ್ತು 42 ರಂತೆ ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಅವಧಿ ಪೂರ್ಣಗೊಂಡ ಗ್ರಾಮಪಂಚಾಯ್ತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 8 ರನ್ವಯ ಚಿಕ್ಕಮಗಳೂರು ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಉಲ್ಲೇಖ(3) ರಂತೆ ಆದೇಶಿಸಲಾಗಿರುತ್ತದೆ.

ಮುಂದುವರೆದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರು ಉಲ್ಲೇಖ (5) ರ ಪತ್ರದಲ್ಲಿ ಕ್ರಮವಾಗಿ ಚಿಕ್ಕಮಗಳೂರು ತಾಲ್ಲೂಕಿನ ಬಸರವಳ್ಳಿ, ಸತ್ತೀಹಳ್ಳಿ, ಲಕ್ಕಮ್ಮನಹಳ್ಳಿ ಮತ್ತು ಸಿಂದಿಗೆರೆ ಗ್ರಾಮ ಪಂಚಾಯಿತಿಗಳಿಗೆ ನೇಮಿಸಿರುವ ಆಡಳಿತಾಧಿಕಾರಿಗಳು ನಿಗಮ ಮಂಡಳಿಯ ಅಧಿಕಾರಿಗಳಾಗಿರುವುದರಿಂದ ಕೆ.ಜಿ.ಐ.ಡಿ ಸಂಖ್ಯೆ ಇಲ್ಲದ ಕಾರಣ ಪಂಚತಂತ್ರ 2.0 ಮತ್ತು ಇ-ಸ್ವತ್ತು ತಂತ್ರಾಂಶದಲ್ಲಿ ನೋಂದಣಿ ಮಾಡಲು ಅವಕಾಶವಿರುವುದಿಲ್ಲವೆಂದು ಹಾಗೂ ಗ್ರಾಮ ಪಂಚಾಯಿತಿಯ ಗ್ರಾಮಸಭೆ, ಸಾಮಾನ್ಯ ಸಭೆ, ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಇತರೆ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ಹೆಚ್ಚುವರಿಯಾಗಿ ತಾಲ್ಲೂಕು ಮಟ್ಟದ ಇಲಾಖಾ

ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳಾಗಿ ನೇಮಿಸುವಂತೆ ಈ ಕೆಳಕಂಡಂತೆ ಕೋರಲಾಗಿರುತ್ತದೆ. ಅದರಂತೆ ಚಿಕ್ಕಮಗಳೂರು ತಾಲ್ಲೂಕಿನ ಈ ಕೆಳಕಂಡ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ಬದಲಾಯಿಸಿ ಆದೇಶಿಸಿದೆ. **ಉಳಿದಂತೆ ಉಲ್ಲೇಖ (3) ರಲ್ಲಿನ ಈ ಕಛೇರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

ತಾಲ್ಲೂಕು: ಚಿಕ್ಕಮಗಳೂರು

ಕ್ರ ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೊಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
1	ಸಹಾಯಕ ಕೃಷಿ ಅಧಿಕಾರಿ ವಸ್ತಾರೆ, ಹೋಬಳಿ, ಚಿಕ್ಕಮಗಳೂರು ತಾಲ್ಲೂಕು.	8277928570	ಬಸರವಳ್ಳಿ,	22.04.2026
			ಸತ್ತಿಹಳ್ಳಿ,	03.02.2026
2	ತಾಲ್ಲೂಕು ಯೋಜನಾಧಿಕಾರಿ ತಾಲ್ಲೂಕು ಪಂಚಾಯಿತಿ ಚಿಕ್ಕಮಗಳೂರು ತಾಲ್ಲೂಕು	9743399778	ಲಕ್ಕಮ್ಮನಹಳ್ಳಿ	03.02.2026
			ಸಿಂದಿಗೆರೆ	10.08.2026

1. ಈ ಅಧಿಸೂಚನೆಯು ಮೇಲ್ಕಂಡ ಗ್ರಾಮಪಂಚಾಯ್ತಿಯ ಚುನಾಯಿತ ಸದಸ್ಯರ ಅವಧಿ ಮುಕ್ತಾಯವಾಗುವ ದಿನಾಂಕದಿಂದ ಜಾರಿಗೆ ಬರುತ್ತದೆ.
2. ಮೇಲಿನಂತೆ ನೇಮಕ ಮಾಡಿರುವ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿ ಪ್ರಭಾರ ವಹಿಸಿಕೊಂಡು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರಿಗೆ ವರದಿ ಸಲ್ಲಿಸಲು ಸೂಚಿಸಿದೆ.
3. ಮೇಲ್ಕಂಡಂತೆ ನೇಮಿಸಿ ನಿಯೋಜಿಸಿರುವ ಅಧಿಕಾರಿಗಳು ಹೆಚ್ಚುವರಿ ಪ್ರಭಾರದಲ್ಲಿ ಸ್ವತಂತ್ರವಾಗಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಸೂಚಿಸಿದೆ.
4. ಮೇಲ್ಕಂಡ ಅಧಿಕಾರಿಗಳು ಸೂಚಿಸಿರುವ ಗ್ರಾಮಪಂಚಾಯ್ತಿಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ / ನಿಯಮ ಹಾಗೂ ಆಯಾ ಯೋಜನೆಗಳ ನಿಯಮ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸತಕ್ಕದ್ದು.
5. ಮೇಲ್ಕಂಡ ಗ್ರಾಮಪಂಚಾಯ್ತಿಗಳಿಗೆ ಸದಸ್ಯರುಗಳು ಚುನಾಯಿತರಾಗಿ ಪೂರ್ಣ ಪ್ರಮಾಣದಲ್ಲಿ ಚುನಾಯಿತ ಪ್ರತಿನಿಧಿಗಳು ರಚನೆಗೊಂಡು ಅಧಿಕಾರ ಪ್ರಾಪ್ತವಾಗುವ ದಿನಾಂಕದವರೆಗೆ ಈ ಅಧಿಸೂಚನೆ ಜಾರಿಯಲ್ಲಿರುತ್ತದೆ. ತದನಂತರ ಮೇಲ್ಕಂಡ ಆಡಳಿತಾಧಿಕಾರಿಯು ಸೂಕ್ತಾನುಸಾರ ಪ್ರಭಾರವನ್ನು ಸಂಬಂಧಿಸಿದವರಿಗೆ ವಹಿಸಿಕೊಟ್ಟು ಕಾರ್ಯದಿಂದ ಬಿಡುಗಡೆ ಹೊಂದಲು ಸೂಚಿಸಿದೆ.

6. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(4) ರಸ್ತೆಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ಗ್ರಾಮಪಂಚಾಯ್ತಿ ಎಂದು ಭಾವಿಸಲಾಗಿದೆ.
7. ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.
8. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಪಂಚಾಯ್ತಿಗಳ ಅಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರನ್ವಯ ಗ್ರಾಮಪಂಚಾಯ್ತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.
9. ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
10. ಅಧಿನಿಯಮದ ಪ್ರಕರಣ 58 ರಂತೆ ಗ್ರಾಮಪಂಚಾಯ್ತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.
11. ಅಧಿನಿಯಮದ ಪ್ರಕರಣ 60 ರಂತೆ ಗ್ರಾಮಪಂಚಾಯ್ತಿಯ ಸಾಮಾನ್ಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು.
12. ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
13. ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆ ಮಾಡತಕ್ಕದ್ದು, ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.
14. ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.
15. ಈ ಮೇಲ್ಕಂಡ ಬದಲಾವಣೆಯನ್ನು ಹೊರತುಪಡಿಸಿ ಉಳಿದಂತೆ ಗ್ರಾಮ ಪಂಚಾಯಿತಿಗಳಿಗೆ ನೇಮಕ ಮಾಡಲಾದ ಆಡಳಿತಾಧಿಕಾರಿಗಳು ಈ ಹಿಂದಿನ ಆದೇಶದಂತೆ ಮುಂದುವರಿಯುತ್ತಾರೆ.
16. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಚಿ 2017 (ಭಾಗ-1) ದಿನಾಂಕ: 12.03.2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(ನಾಗರಾಜ ಎನ್ ಎಂ, ಭಾ.ಆ.ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

PR-60

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಚಿಕ್ಕಮಗಳೂರು – 577101, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ.
OFFICE OF THE DEPUTY COMMISSIONER AND DISTRICT MAGISTRATE,
Chikkamagaluru – 577101, Chikkamagaluru District, Karnataka.
Tel. 08262-230401(O), 230402(R), 231499(ADC), 235262(Rev-Sec), Email: deo.cmagalur@gmail.com/dcckmlr@gmail.com

ಸಂಖ್ಯೆ: DCCKM-ELN0ELNS(GP)/10/2025/CNO: 1009338 ದಿನಾಂಕ: 09.03.2026

-: ಪರಿಷ್ಕೃತ ಅಧಿಕೃತ ಜ್ಞಾಪನ:-
(ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 193 ಕಲಂ 8(1)ರಡಿ)

ವಿಷಯ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

ಉಲ್ಲೇಖ
1. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ ಗ್ರಾಅಪಂ 1003 ಗ್ರಾಅಪಂ 2025 ದಿನಾಂಕ: 16-01-2026.
2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 41 ಮತ್ತು 42 ರಂತೆ
3. ಈ ಕಛೇರಿ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ: 27.01.2026
4. ಈ ಕಛೇರಿ ಪರಿಷ್ಕೃತ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ: 03.02.2026
5. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ರವರ ಕಛೇರಿ ಪತ್ರ ಸಂಖ್ಯೆ: 52306/ZPCKM.12014(16) 9/2026 Development ದಿನಾಮಕ: 06.03.2026.

*****

ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಂತೆ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಅವಧಿಯು, ಅವುಗಳ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಅಸ್ತಿತ್ವದಲ್ಲಿದ್ದು, 5 ವರ್ಷಗಳು ಮುಗಿದ ನಂತರದ ದಿನಾಂಕದಿಂದ ಗ್ರಾಮ ಪಂಚಾಯಿತಿಯ ಅವಧಿಯು ಮುಕ್ತಾಯಗೊಳ್ಳಲಿದ್ದು, ಈ ಹಿಂದೆ 2020-2025 ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳ ಅವಧಿಯು 2026 ನೇ ಜನವರಿ, ಫೆಬ್ರವರಿ, ಮಾರ್ಚ್ ಹಾಗೂ ಮುಂದಿನ ತಿಂಗಳುಗಳ ವಿವಿಧ ದಿನಾಂಕಗಳಂದು ಮುಕ್ತಾಯಗೊಳ್ಳಲಿದ್ದು, 2026-2031 ರ ಅವಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುವ ದಿನಾಂಕದವರೆಗೆ ಸದರಿ ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 8(ii) ರನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಲು ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 41 ಮತ್ತು 42 ರಂತೆ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನಲ್ಲಿ ಅವಧಿ ಪೂರ್ಣಗೊಂಡ ಗ್ರಾಮಪಂಚಾಯ್ತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 8 ರನ್ವಯ ನರಸಿಂಹರಾಜಪುರ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಉಲ್ಲೇಖ(3)&(4) ರಂತೆ ಆದೇಶಿಸಲಾಗಿರುತ್ತದೆ.

ಮುಂದುವರೆದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರು ಉಲ್ಲೇಖ (5)ರ ಪತ್ರದಲ್ಲಿ ಕ್ರಮವಾಗಿ ನರಸಿಂಹರಾಜಪುರ, ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ನೇಮಿಸಿರುವ ಆಡಳಿತಾಧಿಕಾರಿಯನ್ನು ಮೂರರಿಂದ ನಾಲ್ಕು ಗ್ರಾಮ ಪಂಚಾಯಿತಿಗಳಿಗೆ ನೇಮಕಾತಿ ಮಾಡಲಾಗಿರುವುದರಿಂದ ಗ್ರಾಮ ಪಂಚಾಯಿತಿಯ ಗ್ರಾಮಸಭೆ, ಸಾಮಾನ್ಯ ಸಭೆ, ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಇತರೆ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವುದರಿಂದ ಗ್ರಾಮ ಪಂಚಾಯಿತಿಗಳಲ್ಲಿ ಬಹುತೇಕ ಕಾರ್ಯಗಳನ್ನು ಮತ್ತು ವೆಚ್ಚಗಳನ್ನು ತಂತ್ರಾಂಶದ ಮೂಲಕ ನಿರ್ವಹಿಸಬೇಕಿರುವುದರಿಂದ ಮೂರು ನಾಲ್ಕು ಗ್ರಾಮ ಪಂಚಾಯಿತಿಗಳಿಗೆ ಒಬ್ಬ ಆಡಳಿತಾಧಿಕಾರಿಯನ್ನು ನೇಮಿಸಿದರೆ ಕೆಲಸ ಕಾರ್ಯಗಳಿಗೆ ತುಂಬಾ ಅಡಚಣೆಯಾಗುವ ಸಂಭವವಿರುವುದರಿಂದ ಹಾಗೂ ಆಡಳಿತಾಧಿಕಾರಿಗಳಾಗಿ ನೇಮಕಗೊಂಡಿರುವ ನಿಗಮ ಮಂಡಳಿ ಅಧಿಕಾರಿಗಳಿಗೆ ಕೆ.ಜಿ.ಐ.ಡಿ ಸಂಖ್ಯೆ ಇಲ್ಲದ ಕಾರಣ ಪಂಚತಂತ್ರ 2.0 ಮತ್ತು ಇ-ಸ್ವತ್ತು ತಂತ್ರಾಂಶದಲ್ಲಿ ನೋಂದಣಿ ಮಾಡಲು ಅವಕಾಶವಿರುವುದಿಲ್ಲ ಆದ್ದರಿಂದ ಸದರಿ ತಂತ್ರಾಂಶದಿಂದ ನೀಡುವ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಒದಗಿಸಲು ಸಾಧ್ಯವಾಗದ ಹಿನ್ನಲೆಯಲ್ಲಿ ಬನ್ನೂರು, ಬಿ. ಕಣಬೂರು ಮತ್ತು ಮಾಗುಂಡಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚುವರಿಯಾಗಿ ತಾಲ್ಲೂಕು ಮಟ್ಟದ ಇಲಾಖಾ ಅಧಿಕಾರಿಗಳನ್ನು ಆಡಳಿತಾಧಿಕಾರಿಗಳಾಗಿ ನೇಮಿಸುವಂತೆ ಈ ಕೆಳಕಂಡಂತೆ ಕೋರಲಾಗಿರುತ್ತದೆ. ಅದರಂತೆ ನರಸಿಂಹರಾಪುರ ತಾಲ್ಲೂಕಿನ ಈ ಕೆಳಕಂಡ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ಬದಲಾಯಿಸಿ ಆದೇಶಿಸಿದೆ. **ಉಳಿದಂತೆ ಉಲ್ಲೇಖ (3)&(4) ರಲ್ಲಿನ ಈ ಕಛೇರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

ತಾಲ್ಲೂಕು: ನರಸಿಂಹರಾಜಪುರ

ಕ್ರ ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೊಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
1	ಸಹಾಯಕ ಕಾರ್ಯ ಪಾಲಕ ಅಭಿಯಂತರರು, ಪಿ.ಎಂ.ಜೆ.ಎಸ್.ವೈ ನರಸಿಂಹರಾಜಪುರ	8971138938	ಬನ್ನೂರು	22.04.2026
2	ಸಹಾಯಕ ನಿರ್ದೇಶಕರು ಪಶು ವೈದ್ಯ ಇಲಾಖೆ ನರಸಿಂಹರಾಜಪುರ	9008625655	ಬಿ. ಕಣಬೂರು	03.02.2026
3	ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ, ಬಾಳೆಹೊನ್ನೂರು	9986031245	ಮಾಗುಂಡಿ	25.04.2026

1. ಈ ಅಧಿಸೂಚನೆಯು ಮೇಲ್ಕಂಡ ಗ್ರಾಮಪಂಚಾಯ್ತಿಯ ಚುನಾಯಿತ ಸದಸ್ಯರ ಅವಧಿ ಮುಕ್ತಾಯವಾಗುವ ದಿನಾಂಕದಿಂದ ಜಾರಿಗೆ ಬರುತ್ತದೆ.
2. ಮೇಲಿನಂತೆ ನೇಮಕ ಮಾಡಿರುವ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿ ಪ್ರಭಾರ ವಹಿಸಿಕೊಂಡು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರಿಗೆ ವರದಿ ಸಲ್ಲಿಸಲು ಸೂಚಿಸಿದೆ.
3. ಮೇಲ್ಕಂಡಂತೆ ನೇಮಿಸಿ ನಿಯೋಜಿಸಿರುವ ಅಧಿಕಾರಿಗಳು ಹೆಚ್ಚುವರಿ ಪ್ರಭಾರದಲ್ಲಿ ಸ್ವತಂತ್ರವಾಗಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಸೂಚಿಸಿದೆ.

4. ಮೇಲ್ಕಂಡ ಅಧಿಕಾರಿಗಳು ಸೂಚಿಸಿರುವ ಗ್ರಾಮಪಂಚಾಯ್ತಿಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ / ನಿಯಮ ಹಾಗೂ ಆಯಾ ಯೋಜನೆಗಳ ನಿಯಮ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸತಕ್ಕದ್ದು.
5. ಮೇಲ್ಕಂಡ ಗ್ರಾಮಪಂಚಾಯ್ತಿಗಳಿಗೆ ಸದಸ್ಯರುಗಳು ಚುನಾಯಿತರಾಗಿ ಪೂರ್ಣ ಪ್ರಮಾಣದಲ್ಲಿ ಚುನಾಯಿತ ಪ್ರತಿನಿಧಿಗಳು ರಚನೆಗೊಂಡು ಅಧಿಕಾರ ಪ್ರಾಪ್ತವಾಗುವ ದಿನಾಂಕದವರೆಗೆ ಈ ಅಧಿಸೂಚನೆ ಜಾರಿಯಲ್ಲಿರುತ್ತದೆ. ತದನಂತರ ಮೇಲ್ಕಂಡ ಆಡಳಿತಾಧಿಕಾರಿಯು ಸೂಕ್ತಾನುಸಾರ ಪ್ರಭಾರವನ್ನು ಸಂಬಂಧಿಸಿದವರಿಗೆ ವಹಿಸಿಕೊಟ್ಟು ಕಾರ್ಯದಿಂದ ಬಿಡುಗಡೆ ಹೊಂದಲು ಸೂಚಿಸಿದೆ.
6. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(4) ರಸ್ತೆಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ಗ್ರಾಮಪಂಚಾಯ್ತಿ ಎಂದು ಭಾವಿಸಲಾಗಿದೆ.
7. ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.
8. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಪಂಚಾಯ್ತಿಗಳ ಅಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರನ್ವಯ ಗ್ರಾಮಪಂಚಾಯ್ತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.
9. ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
10. ಅಧಿನಿಯಮದ ಪ್ರಕರಣ 58 ರಂತೆ ಗ್ರಾಮಪಂಚಾಯ್ತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.
11. ಅಧಿನಿಯಮದ ಪ್ರಕರಣ 60 ರಂತೆ ಗ್ರಾ7ಮಪಂಚಾಯ್ತಿಯ ಸಾಮಾನ್ಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು.
12. ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
13. ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆ ಮಾಡತಕ್ಕದ್ದು, ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.
14. ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.
15. ಈ ಮೇಲ್ಕಂಡ ಬದಲಾವಣೆಯನ್ನು ಹೊರತುಪಡಿಸಿ ಉಳಿದಂತೆ ಗ್ರಾಮ ಪಂಚಾಯಿತಿಗಳಿಗೆ ನೇಮಕ ಮಾಡಲಾದ ಆಡಳಿತಾಧಿಕಾರಿಗಳು ಈ ಹಿಂದಿನ ಆದೇಶದಂತೆ ಮುಂದುವರಿಯುತ್ತಾರೆ.
16. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಚಿ 2017 (ಭಾಗ-1) ದಿನಾಂಕ: 12.03.2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(ನಾಗರಾಜ ಎನ್ ಎಂ, ಭಾ.ಆ.ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

PR-61

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಚಿಕ್ಕಮಗಳೂರು – 577101, ಚಿಕ್ಕಮಗಳೂರು ಜಿಲ್ಲೆ, ಕರ್ನಾಟಕ.
OFFICE OF THE DEPUTY COMMISSIONER AND DISTRICT MAGISTRATE,
Chikkamagaluru – 577101, Chikkamagaluru District, Karnataka.
Tel. 08262-230401(O), 230402(R), 231499(ADC), 235262(Rev-Sec), Email: deo.cmagalur@gmail.com/dcckmlr@gmail.com

ಸಂಖ್ಯೆ: DCCKM-ELN0ELNS(GP)/10/2025/CNO: 1009338 ದಿನಾಂಕ: 09.03.2026

-: ಪರಿಷ್ಕೃತ ಅಧಿಕೃತ ಜ್ಞಾಪನ:-
(ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 193 ಕಲಂ 8(1)ರಡಿ)

ವಿಷಯ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಕುರಿತು.

ಉಲ್ಲೇಖ
1. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ ಬೆಂಗಳೂರು ರವರ ಕಛೇರಿ ಪತ್ರ ಸಂಖ್ಯೆ ಗ್ರಾಅಪಂ 1003 ಗ್ರಾಅಪಂ 2025 ದಿನಾಂಕ: 16-01-2026.
2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 41 ಮತ್ತು 42 ರಂತೆ
3. ಈ ಕಛೇರಿ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ: 27.01.2026
4. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ರವರ ಕಛೇರಿ ಪತ್ರ ಸಂಖ್ಯೆ: 52306/ZPCKM.12014(16) 9/2026 Development ದಿನಾಮಕ: 06.03.2026.

*****

ಗ್ರಾಮ ಪಂಚಾಯಿತಿಗಳನ್ನು ಒಳಗೊಂಡಂತೆ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಅವಧಿಯು, ಅವುಗಳ ಮೊದಲ ಸಭೆಗಾಗಿ ಗೊತ್ತುಪಡಿಸಿದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಅಸ್ತಿತ್ವದಲ್ಲಿದ್ದು, 5 ವರ್ಷಗಳು ಮುಗಿದ ನಂತರದ ದಿನಾಂಕದಿಂದ ಗ್ರಾಮ ಪಂಚಾಯಿತಿಯ ಅವಧಿಯು ಮುಕ್ತಾಯಗೊಳ್ಳಲಿದ್ದು, ಈ ಹಿಂದೆ 2020-2025 ನೇ ಸಾಲಿಗೆ ರಚಿತವಾಗಿದ್ದ ರಾಜ್ಯದ ಗ್ರಾಮ ಪಂಚಾಯಿತಿಗಳ ಅವಧಿಯು 2026 ನೇ ಜನವರಿ, ಫೆಬ್ರವರಿ, ಮಾರ್ಚ್ ಹಾಗೂ ಮುಂದಿನ ತಿಂಗಳುಗಳ ವಿವಿಧ ದಿನಾಂಕಗಳಂದು ಮುಕ್ತಾಯಗೊಳ್ಳಲಿದ್ದು, 2026-2031 ರ ಅವಧಿಗಾಗಿ ಗ್ರಾಮ ಪಂಚಾಯಿತಿಗಳಿಗೆ ಚುನಾವಣೆ ನಡೆದು ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ನಡೆಯುವ ದಿನಾಂಕದವರೆಗೆ ಸದರಿ ಗ್ರಾಮ ಪಂಚಾಯಿತಿಗಳಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 8(ii) ರನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಲು ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶಿಸಲಾಗಿರುತ್ತದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 41 ಮತ್ತು 42 ರಂತೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಅವಧಿ ಪೂರ್ಣಗೊಂಡ ಗ್ರಾಮಪಂಚಾಯ್ತಿಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993ರ ಕಲಂ 8 ರನ್ವಯ ಮೂಡಿಗೆರೆ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ ಉಲ್ಲೇಖ(3)&(4) ರಂತೆ ಆದೇಶಿಸಲಾಗಿರುತ್ತದೆ.

ಮುಂದುವರೆದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಇವರು ಉಲ್ಲೇಖ (5)ರ ಪತ್ರದಲ್ಲಿ ಕ್ರಮವಾಗಿ ಮೂಡಿಗೆರೆ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ನೇಮಿಸಲಾಗಿರುವ ಕೂವೆ ಮತ್ತು ಕುಂದೂರು ಗ್ರಾಮ ಪಂಚಾಯಿತಿಗಳಿಗೆ ನೇಮಿಸಿರುವ ಆಡಳಿತಾಧಿಕಾರಿಯು ನಿಗಮ ಮಂಡಳಿಯ ಅಧಿಕಾರಿಯಾಗಿರುವುದರಿಂದ ಕೆ.ಜಿ.ಐ.ಡಿ ಸಂಖ್ಯೆ ಇಲ್ಲದ ಕಾರಣ ಪಂಚತಂತ್ರ 2.0 ಮತ್ತು ಇ-ಸ್ವತ್ತು ತಂತ್ರಾಂಶದಲ್ಲಿ ನೋಂದಣಿ ಮಾಡಲು ಅವಕಾಶವಿರುವುದಿಲ್ಲ, ಗ್ರಾಮ ಪಂಚಾಯಿತಿಯ ಗ್ರಾಮಸಭೆ, ಸಾಮಾನ್ಯ ಸಭೆ, ಕುಡಿಯುವ ನೀರಿನ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಇತರೆ ಕೆಲಸ ಕಾರ್ಯಗಳಿಗೆ ತೊಂದರೆಯಾಗುತ್ತಿರುವ ಹಿನ್ನಲೆಯಲ್ಲಿ ಹೆಚ್ಚುವರಿಯಾಗಿ ತಾಲ್ಲೂಕು ಮಟ್ಟದ ಇಲಾಖಾ ಅಧಿಕಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳಾಗಿ ನೇಮಿಸುವಂತೆ ಈ ಕೆಳಕಂಡಂತೆ ಕೋರಲಾಗಿರುತ್ತದೆ. ಅದರಂತೆ ಮೂಡಿಗೆರೆ ತಾಲ್ಲೂಕಿನ ಈ ಕೆಳಕಂಡ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ಬದಲಾಯಿಸಿ ಆದೇಶಿಸಿದೆ. **ಉಳಿದಂತೆ ಉಲ್ಲೇಖ (3) ರಲ್ಲಿನ ಈ ಕಛೇರಿ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.**

ತಾಲ್ಲೂಕು: ಮೂಡಿಗೆರೆ

ಕ್ರ ಸಂ	ಆಡಳಿತಾಧಿಕಾರಿಯಾಗಿ ನೇಮಕ ಮಾಡಿದ ಅಧಿಕಾರಿಯ ಹೆಸರು/ಹುದ್ದೆ	ದೂರವಾಣಿ ಮೋಬೈಲ್ ಸಂಖ್ಯೆ	ಗ್ರಾಮ ಪಂಚಾಯಿತಿಯ ಹೆಸರು	ಅವಧಿ ಮುಗಿದ/ ಮುಗಿಯುವ ದಿನಾಂಕ
1	ಹಿಂದುಳಿದ ವರ್ಗಗಳ ಕಲ್ಯಾಧಿಕಾರಿ, ಮೂಡಿಗೆರೆ ತಾಲ್ಲೂಕು	9448657701	ಕೂವೆ	02.02.2026
2	ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನಿ ಮತ್ತು ನೈ.ಉ ಏ ಮೂಡಿಗೆರೆ ತಾಲ್ಲೂಕು	8550835577	ಕುಂದೂರು	05.08.2026

1. ಈ ಅಧಿಸೂಚನೆಯು ಮೇಲ್ಕಂಡ ಗ್ರಾಮಪಂಚಾಯ್ತಿಯ ಚುನಾಯಿತ ಸದಸ್ಯರ ಅವಧಿ ಮುಕ್ತಾಯವಾಗುವ ದಿನಾಂಕದಿಂದ ಜಾರಿಗೆ ಬರುತ್ತದೆ.
2. ಮೇಲಿನಂತೆ ನೇಮಕ ಮಾಡಿರುವ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿ ಪ್ರಭಾರ ವಹಿಸಿಕೊಂಡು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯ್ತಿ, ಚಿಕ್ಕಮಗಳೂರು ಹಾಗೂ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಇವರಿಗೆ ವರದಿ ಸಲ್ಲಿಸಲು ಸೂಚಿಸಿದೆ.
3. ಮೇಲ್ಕಂಡಂತೆ ನೇಮಿಸಿ ನಿಯೋಜಿಸಿರುವ ಅಧಿಕಾರಿಗಳು ಹೆಚ್ಚುವರಿ ಪ್ರಭಾರದಲ್ಲಿ ಸ್ವತಂತ್ರವಾಗಿ ಆಡಳಿತಾಧಿಕಾರಿ ಕಾರ್ಯನಿರ್ವಹಿಸಲು ಸೂಚಿಸಿದೆ.
4. ಮೇಲ್ಕಂಡ ಅಧಿಕಾರಿಗಳು ಸೂಚಿಸಿರುವ ಗ್ರಾಮಪಂಚಾಯ್ತಿಗಳ ದೈನಂದಿನ ಕಾರ್ಯನಿರ್ವಹಣೆಯನ್ನು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ / ನಿಯಮ ಹಾಗೂ ಆಯಾ ಯೋಜನೆಗಳ ನಿಯಮ ಮಾರ್ಗಸೂಚಿಗಳಂತೆ ಕಾರ್ಯನಿರ್ವಹಿಸತಕ್ಕದ್ದು.
5. ಮೇಲ್ಕಂಡ ಗ್ರಾಮಪಂಚಾಯ್ತಿಗಳಿಗೆ ಸದಸ್ಯರುಗಳು ಚುನಾಯಿತರಾಗಿ ಪೂರ್ಣ ಪ್ರಮಾಣದಲ್ಲಿ ಚುನಾಯಿತ ಪ್ರತಿನಿಧಿಗಳು ರಚನೆಗೊಂಡು ಅಧಿಕಾರ ಪ್ರಾಪ್ತವಾಗುವ ದಿನಾಂಕದವರೆಗೆ ಈ ಅಧಿಸೂಚನೆ ಜಾರಿಯಲ್ಲಿರುತ್ತದೆ. ತದನಂತರ ಮೇಲ್ಕಂಡ ಆಡಳಿತಾಧಿಕಾರಿಯು ಸೂಕ್ತಾನುಸಾರ ಪ್ರಭಾರವನ್ನು ಸಂಬಂಧಿಸಿದವರಿಗೆ ವಹಿಸಿಕೊಟ್ಟು ಕಾರ್ಯದಿಂದ ಬಿಡುಗಡೆ ಹೊಂದಲು ಸೂಚಿಸಿದೆ.

6. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 8(4) ರಸ್ತೆಯ ಆಡಳಿತಾಧಿಕಾರಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಕ್ರಮಬದ್ಧವಾಗಿ ಗ್ರಾಮಪಂಚಾಯ್ತಿ ಎಂದು ಭಾವಿಸಲಾಗಿದೆ.
7. ಸದರಿ ಅಧಿನಿಯಮದ ಪ್ರಕರಣ 8(3) ರನ್ವಯ ಆಡಳಿತಾಧಿಕಾರಿಯು ಗ್ರಾಮಪಂಚಾಯ್ತಿಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.
8. ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮಪಂಚಾಯ್ತಿಗಳ ಅಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006 ರನ್ವಯ ಗ್ರಾಮಪಂಚಾಯ್ತಿಯ ಹಣಕಾಸಿನ ವ್ಯವಹಾರವನ್ನು ಆಡಳಿತಾಧಿಕಾರಿ ಮತ್ತು ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಜಂಟಿಯಾಗಿ ನಿರ್ವಹಿಸತಕ್ಕದ್ದು.
9. ವಾರ್ಡ್ ಸಭೆ ಮತ್ತು ಗ್ರಾಮಸಭೆಗಳನ್ನು ಕಾಲ ಕಾಲಕ್ಕೆ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
10. ಅಧಿನಿಯಮದ ಪ್ರಕರಣ 58 ರಂತೆ ಗ್ರಾಮಪಂಚಾಯ್ತಿ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.
11. ಅಧಿನಿಯಮದ ಪ್ರಕರಣ 60 ರಂತೆ ಗ್ರಾ7ಮಪಂಚಾಯ್ತಿಯ ಸಾಮಾನ್ಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು.
12. ಅಧಿನಿಯಮದ ಪ್ರಕರಣ 62 ರಂತೆ ಅಧ್ಯಕ್ಷನ ಪ್ರಕಾರ್ಯಗಳು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
13. ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ನಿರ್ವಹಣೆಯನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಲಾಗಿದ್ದು, ಗ್ರಾಮ ಪಂಚಾಯಿತಿ ಗ್ರಂಥಾಲಯ ನಿರ್ವಹಣೆ ಮಾಡತಕ್ಕದ್ದು, ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ಗೌರವಧನವನ್ನು ಮಾಸಿಕವಾಗಿ ಪಾವತಿಸತಕ್ಕದ್ದು.
14. ಗ್ರಾಮ ಪಂಚಾಯಿತಿ ನೌಕರರಿಗೆ ಮಾಸಿಕವಾಗಿ ಕನಿಷ್ಠ ವೇತನ ಪಾವತಿಸತಕ್ಕದ್ದು.
15. ಈ ಮೇಲ್ಕಂಡ ಬದಲಾವಣೆಯನ್ನು ಹೊರತುಪಡಿಸಿ ಉಳಿದಂತೆ ಗ್ರಾಮ ಪಂಚಾಯಿತಿಗಳಿಗೆ ನೇಮಕ ಮಾಡಲಾದ ಆಡಳಿತಾಧಿಕಾರಿಗಳು ಈ ಹಿಂದಿನ ಆದೇಶದಂತೆ ಮುಂದುವರಿಯುತ್ತಾರೆ.
16. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಚಿ 2017 (ಭಾಗ-1) ದಿನಾಂಕ: 12.03.2018 ರಲ್ಲಿ ಗ್ರಾಮ ಪಂಚಾಯಿತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಆಡಳಿತಾಧಿಕಾರಿಯು ಗ್ರಾಮ ಪಂಚಾಯಿತಿಗೆ ಯಾವುದೇ ನೌಕರರನ್ನು ನೇಮಕ ಮಾಡಿಕೊಳ್ಳತಕ್ಕದ್ದಲ್ಲ.

(ನಾಗರಾಜ ಎನ್ ಎಂ, ಭಾ.ಆ.ಸೇ)
ಜಿಲ್ಲಾಧಿಕಾರಿ
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು.

PR-62

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ಉಡುಪಿ ಜಿಲ್ಲೆ, "ರಜತಾದ್ರಿ"
ಮಣಿಪಾಲ, ಉಡುಪಿ – 576104
Email: udupidc@gmail.com

(ಕಂದಾಯ ಇಲಾಖೆ)

Deputy Commissioner &
District Magistrate's Office,
Udupi District, " Rajatadri",
Manipal, Udupi - 576104
Office: 0820-2574924, 2574925

ಸಂ: ಗಭೂಇ/ಹಿಭೂ(ಉಡುಪಿ)/ NON CRZ /ಮ.ಬ್ಲಾ./ಅಧಿಸೂಚನೆ/2025-26 ದಿನಾಂಕ: 11-02-2026

ತಿದ್ದುಪಡಿ ಅಧಿಸೂಚನೆ

ವಿಷಯ: ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024 ರನ್ವಯ ಉಡುಪಿ ಜಿಲ್ಲಾ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳ ವ್ಯಾಪ್ತಿಯಲ್ಲಿ ಗುರುತಿಸಿರುವ ಮರಳು ಬ್ಲಾಕ್‌ನ್ನು ಅಧಿಸೂಚನೆ ಹೊರಡಿಸುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಸಿಐ 344 ಎಂಎಂಎನ್ 2019, ಬೆಂಗಳೂರು, ದಿನಾಂಕ: 05.05.2020.

2. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024.

3. ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಗಭೂಇ/ಹಿಭೂ(ಉಡುಪಿ)/ಮರಳು ಬ್ಲಾಕ್ ಗಳು/ಅಧಿಸೂಚನೆ/ 2022-23, ದಿನಾಂಕ: 10.01.2023.

4. ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕ: 13.01.2023.

6. ದಿನಾಂಕ: 19.05.2025 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯ ನಡವಳಿಯಂತೆ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಜಿಲ್ಲಾ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳ ವ್ಯಾಪ್ತಿಯಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್‌ಗಳನ್ನು ಹೊಸ ಮರಳು ನೀತಿ 2020 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ತಿದ್ದುಪಡಿ ನಿಯಮ 2021, 2023 & 2024 ರ ನಿಯಮ 31-ZB ರಂತೆ ನಾನ್ ಸಿ.ಆರ್.ಝಡ್ ವ್ಯಾಪ್ತಿಯ IV, V & VI ನೇ ಶ್ರೇಣಿಯ ನದಿಗಳಲ್ಲಿನ ಮರಳು ಬ್ಲಾಕ್‌ಗಳನ್ನು ಸರ್ಕಾರಿ/ ಅಭಿವೃದ್ಧಿ ಕಾಮಗಾರಿಗಳಿಗಾಗಿ ಸರ್ಕಾರಿ ಸ್ವಾಮ್ಯದ ಇಲಾಖೆ, ಸಂಸ್ಥೆ/ ನಿಗಮ/ ಮಂಡಳಿಗಳಿಗೆ ಮೀಸಲಿರಿಸಬಹುದಾಗಿರುತ್ತದೆ.

ಅದರಂತೆ ಬ್ರಹ್ಮಾವರ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಗುರುತಿಸಲಾಗಿರುವ ಮರಳು ಬ್ಲಾಕ್ ಸಂಖ್ಯೆ: SB-16 ನ್ನು ಸಾಮಾನ್ಯ ವರ್ಗಕ್ಕೆ ಮೀಸಲಿರಿಸಿ ದಿನಾಂಕ: 10.01.2023 ರಂದು ಅಧಿಸೂಚನೆ ಹೊರಡಿಸಿ, ದಿನಾಂಕ: 13.01.2023 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ.

ಸದರಿ ಮರಳು ಬ್ಲಾಕ್ ನ ಅಕ್ಷಾಂಶ ರೇಖಾಂಶದಲ್ಲಿ ವ್ಯತ್ಯಾಸವಿರುವುದರಿಂದ ಮತ್ತೊಮ್ಮೆ ಜಂಟಿ ಮೋಜಣಿ ನಡೆಸಿ ವರದಿ/ ನಕ್ಷೆಯನ್ನು ಪಡೆದು ಆಶಯ ಪತ್ರವನ್ನು ನೀಡಲು ಕ್ರಮವಹಿಸುವಂತೆ ದಿನಾಂಕ 19.05.2025 ರಂದು ನಡೆದ ಜಿಲ್ಲಾ ಮರಳು ಉಸ್ತುವಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ.

ಅದರಂತೆ ದಿನಾಂಕ: 16.09.2025 ರಂದು ಜಂಟಿ ಮೋಜಣಿ ನಡೆಸಿ ಅಕ್ಷಾಂಶ-ರೇಖಾಂಶಗಳನ್ನು ಸರಿಪಡಿಸಿ ವರದಿ ಹಾಗೂ ನಕ್ಷೆಯನ್ನು ಪಡೆಯಲಾಗಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಬ್ಲಾಕ್ ಸಂಖ್ಯೆ	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ (ಎಕರೆ)	ನದಿ	ಅಕ್ಷಾಂಶ-ರೇಖಾಂಶ	ಪ್ರಮಾಣ (ಮೆ.ಟನ್)	ಮೀಸಲಾತಿ
1	SB-16	ಬ್ರಹ್ಮಾವರ	ಹೊಸೂರು	22	2.00	ಮಡಿಸಾಲು ಹೊಳೆ	A. N 13° 25' 49.79" E 74° 54' 54.21" B. N 13° 25' 50.38" E 74° 54' 59.02" C. N 13° 25' 51.28" E 74° 55' 01.71" D. N 13° 25' 53.47" E 74° 55' 05.42" E. N 13° 25' 52.87" E 74° 55' 05.76" F. N 13° 25' 50.87" E 74° 55' 01.97" G. N 13° 25' 49.63" E 74° 54' 59.39" H. N 13° 25' 48.82" E 74° 54' 54.41"	10,436	ಸಾಮಾನ್ಯ

ಷರತ್ತುಗಳು:

1. ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶದನ್ವಯ ಕ್ರಮವಹಿಸುವುದು.
2. ಕರ್ನಾಟಕ ಉಪಖನಿಜ ರಿಯಾಯತಿ ನಿಯಮಾವಳಿ 1994 ರ ತಿದ್ದುಪಡಿ ಅಧಿನಿಯಮ 2016 ಹಾಗೂ 2020 ರ ನಿಯಮ 15A ರಂತೆ ಶೆಡ್ಯೂಲ್ IIA ರಲ್ಲಿ ಸಾಮಾನ್ಯ ಬ್ಲಾಕ್‌ಗಳಿಗೆ ನಿಗದಿಪಡಿಸಿರುವ 5 ಹೆಕ್ಟೇರ್ ವಿಸ್ತೀರ್ಣವನ್ನು ಕಡಿಮೆಗೊಳಿಸಿ, 1.00 ಎಕರೆ ಅಥವಾ 1.00 ಎಕರೆಗಿಂತ ಹೆಚ್ಚಿನ ಪ್ರದೇಶಗಳಲ್ಲಿ ಗುರುತಿಸಿರುವ ಮರಳು ಬ್ಲಾಕ್‌ಗಳನ್ನು ವಿಲೇವಾರಿ ಮಾಡಲು ಹಾಗೂ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ನಿಯಮ 8-R ರಲ್ಲಿ ತಿಳಿಸಿರುವಂತೆ ಕ್ಲಸ್ಟರ್ ವ್ಯಾಪ್ತಿಯಲ್ಲಿಯೂ ಬಾರದೇ ಇರುವುದರಿಂದ ವಿನಾಯಿತಿ (Exception) ನೀಡಲು ಕೋರಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು (ಎಂಎಸ್ಎಂಇ & ಗಣಿ) ಬೆಂಗಳೂರು ರವರಿಗೆ ಪತ್ರ ಬರೆಯಲಾಗಿದ್ದು, ಸರ್ಕಾರದಿಂದ ವ್ಯತಿರಿಕ್ತ ಆದೇಶ ಬಂದಲ್ಲಿ ಸದರಿ ಅಧಿಸೂಚನೆಯನ್ನು ರದ್ದುಪಡಿಸಲಾಗುವುದು.
3. ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ 1994 ರ ಅಧ್ಯಾಯ II-A ಮತ್ತು ಅಧ್ಯಾಯ IV-B ರಲ್ಲಿರುವ ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯವು ಹೊರಡಿಸಿರುವ Sustainable Sand Mining Guidelines, 2016 & Enforcement and monitoring guidelines, 2020 ರಂತೆ ಮರಳು ಗಣಿಗಾರಿಕೆ ನಿರ್ವಹಿಸುವುದು.
4. ಮರಳು ಗಣಿ ಗುತ್ತಿಗೆಯ ವರ್ಗಾವಣೆಯನ್ನು ನಿಷೇಧಿಸಲಾಗಿರುತ್ತದೆ.
5. ಯಾಂತ್ರಿಕ ದೋಣಿಗಳು ಮತ್ತು ಡ್ರೆಜ್ಜಿಂಗ್ ಯಂತ್ರಗಳ ಬಳಕೆಯನ್ನು ನಿಷೇಧಿಸಿದೆ.
6. ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ರಾಜಧನ ಹಾಗೂ ಅನ್ವಯವಾಗುವ ಇತರೆ ಶುಲ್ಕಗಳನ್ನು ಪಾವತಿಸಿ, ವಿಶೇಷ ರಕ್ಷಣಾತ್ಮಕವುಳ್ಳ ಪರವಾನಿಗೆ ಹಾಳೆ (Special Security Permit Papers) ಗಳಲ್ಲಿ ಮರಳು ಸಾಗಾಣಿಕೆ ಪರವಾನಿಗೆಯನ್ನು ಮುದ್ರಿಸಿ ಗ್ರಾಹಕರಿಗೆ ನೀಡುವುದು.
7. ಅಧಿಸೂಚಿತ ಪ್ರದೇಶಗಳಲ್ಲಿ, ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮಾತ್ರ ಮರಳು ತೆಗೆಯುವಿಕೆ ಮತ್ತು ಸಾಗಾಣಿಕೆ ಕಾರ್ಯವನ್ನು ನಿರ್ವಹಿಸತಕ್ಕದ್ದು. ಸಂಜೆ 6 ಗಂಟೆಯ ನಂತರ ಮರಳು ತೆಗೆಯುವಿಕೆ, ತುಂಬುವಿಕೆ ಮತ್ತು ಸಾಗಾಣಿಕೆಯನ್ನು ಅನಧಿಕೃತ ಮರಳು ಗಣಿ ಚಟುವಟಿಕೆ ಎಂದು ಪರಿಗಣಿಸಿ ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ, 1994 ರಂತೆ ಸಂಬಂಧಿಸಿದ ಇಲಾಖೆ/ ಅಧಿಕಾರಿಗಳು ಹಾಗೂ ತಾಲ್ಲೂಕು/ ಜಿಲ್ಲಾ ಮರಳು ಉಸ್ತುವಾರಿ ಸಮಿತಿಯ ಸದಸ್ಯರುಗಳು ಕ್ರಮ ಕೈಗೊಳ್ಳುವುದು.

(ಸ್ವರೂಪ ಟಿ.ಕೆ)
ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮರಳು ಉಸ್ತುವಾರಿ ಸಮಿತಿ
ಉಡುಪಿ ಜಿಲ್ಲೆ, ಉಡುಪಿ

PR-63

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ

ನಮೂನೆ-V

[ಕರ್ನಾಟಕ ತಿದ್ದುಪಡಿ ನಿಯಮ-5 20(1)(ಬಿ)]

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ರ ಕಲಂ 11(1)ರ ಮೇರೆಗೆ ಅಧಿಸೂಚನೆ.

ಸಂ: MDC-RHM0LAQ/203/2024 **ದಿನಾಂಕ:19.02.2026**

ಸಾರ್ವಜನಿಕ ಉದ್ದೇಶದ ಮಳವಳ್ಳಿ ತಾಲ್ಲೂಕು, ಕಿರುಗಾವಲು ಹೋಬಳಿ, ಕಿರುಗಾವಲು ಗ್ರಾಮದ ಸರ್ವೆ ನಂ.220 ರಲ್ಲಿ 0-35 ಗುಂಟೆ ಜಮೀನನ್ನು ಪರಿಶಿಷ್ಟ ಜಾತಿ ಜನಾಂಗದವರು ಸ್ಮಶಾನಕ್ಕಾಗಿ ಹಾಗೂ ಸರ್ವೆ ನಂ.220 ರಲ್ಲಿ 0-05 ಗುಂಟೆ, ಸರ್ವೆ ನಂ.528/2 ರಲ್ಲಿ 0-02 ಗುಂಟೆ ಜಮೀನನ್ನು ಪರಿಶಿಷ್ಟ ಜಾತಿ ಜನಾಂಗದವರ ಸ್ಮಶಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಾಗಿ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯು ಅವಶ್ಯಕತೆಯಿರುತ್ತದೆ ಎಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ:30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:23/07/2019 ರಿಂದ ಜಾರಿಗೆ ಬಂದಿರುವ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019** (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:16) ರ ಕಲಂ 10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳು ಅನ್ವಯಿಸುವುದರಿಂದ ಸರ್ಕಾರದಿಂದ ಅಧಿಸೂಚನೆ ಸಂಖ್ಯೆ: ಕಂಇ 04 ಎಕ್ಯೂಎಂಎ 2025 ದಿನಾಂಕ:12/01/2026 ರಂತೆ ಸಾಮಾಜಿಕ ಪರಿಣಾಮ ಮೌಲ್ಯ ಮಾಪನದಿಂದ ವಿನಾಯಿತಿ ನೀಡಿ ಆದೇಶಿಸಲಾಗಿರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013** (2013 ರ ಕೇಂದ್ರ ಅಧಿನಿಯಮ ಸಂಖ್ಯೆ 30) ರ ಕಲಂ 12ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ರವರು ಈ ಮೂಲಕ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ ರವರಿಗೆ ಅಧಿಕಾರವನ್ನು ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲಿ ಯಾರೂ ಅಡ್ಡಿ ಮಾಡಕೂಡದೆಂದು ಎಚ್ಚರಿಸಲಾಗಿದೆ. **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ (30)ರ ಕಲಂ 11(1)ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ, ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು

ಸಂ: MDC-RHM0LAQ/203/2024

ಕೈಗೊಳ್ಳದಂತೆ ನಿರ್ಬಂಧಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013 ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ 15(1)ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪಣೆಗಳಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ ಜಿಲ್ಲೆ, ಮಂಡ್ಯ ರವರಿಗೆ ಲಿಖಿತವಾಗಿ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇ ಇಡಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ಒಂದು ನಕ್ಷೆಯನ್ನು ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಮಂಡ್ಯ. ತಹಶೀಲ್ದಾರ್ ಮಳವಳ್ಳಿ ತಾಲ್ಲೂಕು, ಮಳವಳ್ಳಿ, ಸಹಾಯಕ ನಿರ್ದೇಶಕರು (ಗ್ರೇಡ್-1) ಸಮಾಜ ಕಲ್ಯಾಣ ಇಲಾಖೆ, ಮಳವಳ್ಳಿ, ತಾಲ್ಲೂಕು ಸರ್ವೆಯರ್ ತಾಲ್ಲೂಕು ಕಛೇರಿ, ಮಳವಳ್ಳಿ ರವರು

ಸಂಬಂಧಪಟ್ಟ ಭೂಕೋರಿಕಾ ಇಲಾಖೆಯವರು ಮೇಲು ಸಹಿ ಮಾಡಲಾಗಿದೆ. ಸದರಿ ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಇವರುಗಳ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಅನುಸೂಚಿ

ಗ್ರಾಮ: ಕಿರುಗಾವಲು ಹೋಬಳಿ: ಕಿರುಗಾವಲು ತಾಲ್ಲೂಕು: ಮಳವಳ್ಳಿ

ಜಿಲ್ಲೆ: ಮಂಡ್ಯ

ಕ್ರ. ಸಂ	ಖಾತೆದಾರರ/ ಅನುಭವದಾರರ ಹೆಸರು	ಸರ್ವೆ ನಂ	ಆಕಾರ ಬಂದ್ ನಂತೆ ಒಟ್ಟು ವಿಸ್ತೀರ್ಣ			ಭೂಸ್ವಾಧೀನವಾಗಲಿರುವ ವಿಸ್ತೀರ್ಣ			ಚಕ್ಕುಬಂದಿ				ಭೂಸ್ವಾಧೀನವಾಗಲಿರುವ ಜಮೀನಿನಲ್ಲಿರುವ ಮರ, ಕಟ್ಟಡ, ಇತ್ಯಾದಿ	ಷರಾ
			ವಿಸ್ತೀರ್ಣ	ಕರಹ	ಖರಾಬು	ಖಣ	ಖರಾಬು	ಒಟ್ಟು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
1	2	3	4	5	6	7a	7b	7c	8	9	10	11	12	13
1	ಕೆ.ಬಿ ಸನತ್ ಕುಮಾರ್ ಬಿನ್ ಲೇಟ್ ಕೆ. ಬೋಜರಾಜ್	220	3-39	ಖುಷ್ಕಿ	-	0-35 0-05	-	0-35 0-05	ಸ.ನಂ.201	528	509	ಸ.ನಂ 220 ರ ಉಳಿಕೆ ಜಮೀನು	-	-
2	ಎಸ್ ಕೃಷ್ಣಪ್ಪ ಬಿನ್ ಸಿದ್ದೇಗೌಡ	528/2	2-14	ಖುಷ್ಕಿ	-	0-02	-	0-02	ಲಾ.ಸ.ನಂ. 201	ಲಾ. ಸ. ನಂ. 528	ಲಾ. ಸ. ನಂ. 509	ಸ.ನಂ .200ರ ಉಳಿಕೆ ಜಮೀನು	-	-
ಒಟ್ಟು						1-02 ಎಕರೆ ಗುಂಟೆ	-	1-02 ಎಕರೆ ಗುಂಟೆ						

ಸಂ: MDC-RHM0LAQ/203/2024

ಫೋಷ್ಪಾರೆ

ಕ್ರ. ಸಂ	ಗ್ರಾಮ	ಭೂಸ್ವಾಧೀನ ಒಟ್ಟು ವಿಸ್ತೀರ್ಣ	ಖರಾಬು	ಜಾತಾ ಉಳಿಕೆ ವಿಸ್ತೀರ್ಣ
1	ಕಿರುಗಾವಲು	1-02	-	-

ಸಹಿ-

ವಿಶೇಷ ಭೂಸ್ವಾಧೀನಾಧಿಕಾರಿ

ಜಿಲ್ಲಾಧಿಕಾರಿ ಮಂಡ್ಯ ಜಿಲ್ಲೆ ಮಂಡ್ಯ

ಸಹಿ/-

ಮಂಡ್ಯ ಜಿಲ್ಲೆ ಮಂಡ್ಯ

PR-64

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without preayment **WPP No. 297**

ಮಂಗಳೂರು ಮಹಾನಗರ ಪಾಲಿಕೆ

ಫಾರಂ - 1

[ಕೆಟಿಸಿಪಿ ಕಾಯ್ದೆಯ ಸೆಕ್ಷನ್ 14 ಬಿ ಪ್ರಕಾರ ಎಂಸಿಸಿ ಅಳವಡಿಸಿಕೊಂಡ ಕಾರ್ಯವಿಧಾನ]

ಮನಪಾ/ನಯೋವಿ/ಟಿ.ಡಿ.ಆರ್/ಸಿಆರ್ -108/2025-26 **ದಿನಾಂಕ**:24-02-2026.

ಅಧಿಸೂಚನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14-ಬಿ ಅವಕಾಶಗಳನ್ವಯ ಈ ಕೆಳಗಿನ ಅನುಸೂಚಿಯಲ್ಲಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕಾಗಿ ಮಂಗಳೂರು ಮಹಾನಗರಪಾಲಿಕೆಗೆ ಸ್ಥಳೀಯ ಸಂಸ್ಥೆಯ ಪ್ರಸ್ತಾವನೆಯನ್ವಯ **ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗೆ ಅವಶ್ಯವಿರುವ** ಜಮೀನನ್ನು KTCP ಕಾಯ್ದೆಯಂತೆ ಸ್ವಾಧೀನಪಡಿಸಲು ಅವಶ್ಯಕವಾಗಿರುತ್ತದೆ. ಸದರಿ ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಭೂಮಿಯನ್ನು ಬಿಟ್ಟುಕೊಡುವ ಬಗ್ಗೆ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಏಕ ನಿವೇಶನ ನಕ್ಷೆ ಅನುಮೋದನೆಗೊಂಡ ಮೇರೆಗೆ ಜಮೀನಿನ ಮೂಲ ಹಕ್ಕುದಾರರು ಈ ಕೆಳಗೆ ತಿಳಿಸಿದ ಅನುಸೂಚಿಯಂತೆ ಜಮೀನನ್ನು ಮಹಾನಗರಪಾಲಿಕೆಗೆ ಪರಿತ್ಯಾಜನಾ ಪತ್ರದ ಮೂಲಕ ಬಿಟ್ಟುಕೊಟ್ಟಿರುತ್ತಾರೆ. ಭೂಮಾಲಿಕರುಗಳು ಮತ್ತು ಹಿತಾಸಕ್ತಿದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಯೋಜನೆಯ ವ್ಯಾಪ್ತಿಯಲ್ಲಿನ ಜಮೀನಿಗೆ ಸಂಬಂಧಪಟ್ಟವರು ಸಂಬಂಧಿಸಿದ ದಾಖಲಾತಿಗಳಾದ ಅಭಿವೃದ್ಧಿ ಹಕ್ಕುಗಳಿಗೆ ಭೂಮಿಯನ್ನು ಬಿಟ್ಟುಕೊಡುವ ಸಂಬಂಧ ಇನ್ನು ಇತರ ಹಿತಾಸಕ್ತಿ/ಆಕ್ಷೇಪಣೆ/ಸಲಹೆಯನ್ನು, ನಗರಯೋಜನೆ/ಟಿ.ಡಿ.ಆರ್ ವಿಭಾಗ, ಮಂಗಳೂರು ಮಹಾನಗರ ಪಾಲಿಕೆಗೆ ಈ ಅಧಿಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬಹುದಾಗಿರುತ್ತದೆ.

ಭೂಮಾಲಿಕರು ಹಣಕಾಸು ಪರಿಹಾರ ರಹಿತವಾಗಿ ಬಿಟ್ಟುಕೊಟ್ಟ ಭೂಪ್ರದೇಶದ ವಿಸ್ತೀರ್ಣಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿಯನ್ನು) ಪಡೆಯುತ್ತಾರೆ ಮತ್ತು ಬಿಟ್ಟುಕೊಟ್ಟ ಕಟ್ಟಡ ಪ್ರದೇಶದ ಮೌಲ್ಯಕ್ಕೆ ಆ ಕಟ್ಟಡ ಇರುವ ಭೂಮಿಯ ಮಾರುಕಟ್ಟೆ ಮೌಲ್ಯದಿಂದ ಭಾಗಿಸಿ, ಬಿಟ್ಟುಕೊಟ್ಟ ಕಟ್ಟಡಕ್ಕೆ ಎರಡು ಪಟ್ಟು ವಿಸ್ತೀರ್ಣದ ಅಭಿವೃದ್ಧಿ ಹಕ್ಕುಗಳನ್ನು (ಕಾಲ್ಪನಿಕ ಭೂಮಿ) ಪಡೆಯಲು ಅವರು ಅರ್ಹರು. ಬಿಟ್ಟುಕೊಟ್ಟ ಜಮೀನಿನ ಮೌಲ್ಯಕ್ಕೆ, ಬಳಸುವ ನಿವೇಶನದ ಮೌಲ್ಯದಿಂದ ಭಾಗಿಸಿಕೊಂಡು, ಅಪವರ್ತನಗೊಳಿಸಿ ಕಾಲ್ಪನಿಕ ಭೂಮಿಯನ್ನು ಉಪಯೋಗಿಸಬಹುದಾಗಿದೆ. ಕಾಲ್ಪನಿಕ ಭೂಮಿಯು ಎಫ್.ಎ.ಆರ್ ಗೆ ಅರ್ಹವಾಗಿರುತ್ತದೆ. ಮತ್ತು ಅದನ್ನು ಪಡೆಯುವ ನಿವೇಶನದಲ್ಲಿ ನಿಯಮಗಳಡಿಯಲ್ಲಿ ಸೂಚಿಸಲಾದ ನಿಬಂಧನೆಗಳು ಹಾಗೂ ಶರತ್ತುಗಳ ಅಡಿಯಲ್ಲಿ ಹೆಚ್ಚುವರಿ ನಿರ್ಮಾಣಕ್ಕೆ ಬಳಸಬಹುದು.

ಅನುಸೂಚಿ

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗೆ ಅವಶ್ಯವಾಗಿರುವ ಜಮೀನಿನ ವಿವರ ಈ ಕೆಳಗಿನಂತಿದೆ.

ಕ್ರ. ಸಂ	ಗ್ರಾಮದ ಹೆಸರು	ಟಿ.ಎಸ್ ನಂಬ್ರ/ ಆರ್.ಎಸ್.ನಂಬ್ರ:	ಪರಿತ್ಯಾಜನಾ ವಿಸ್ತೀರ್ಣ	ಪರಿತ್ಯಾಜನ ದಸ್ತಾವೇಜು ಸಂಖ್ಯೆಮತ್ತು ದಿನಾಂಕ	ಪರ್ಯಾಯವಾಗಿ ಡಿ.ಆರ್.ಸಿ/ ಟಿ.ಡಿ.ಆರ್ ನೀಡಬೇಕಾದ ವಿಸ್ತೀರ್ಣ	ಪರಿತ್ಯಾಜನಾ ಪತ್ರದಂತೆ ಜಮೀನು ಬಿಟ್ಟುಕೊಟ್ಟಿರುವ ಭೂಮಾಲಿಕರ/ಹಿತಾಸಕ್ತಿದಾರರ ಹೆಸರು ಮತ್ತು ವಿಳಾಸ
1	ಪದವು	ಆರ್.ಎಸ್.ನಂಬ್ರ: 211-2ಸಿ(ಪಿ1), 211-2ಸಿ(ಪಿ2) (ಖಾತಾ ಪ್ರಕಾರ 211-2ಸಿ1)	68.00 ಚ.ಮೀ	MGC-1-05798 -2025-26 ದಿನಾಂಕ: 18-10-2025.	136.00 ಚ.ಮೀ	ಶ್ರೀಮತಿ ಶಕುಂತಲಾ ಕೋಂ. ಕೆ. ಗಣೇಶ್ ಕುಂಟಲ್ಪಾಡಿ ಮನೆ, ಶಕ್ತಿನಗರ, ಮಂಗಳೂರು.

ಸಹಿ/-
ನಗರ ಯೋಜನಾಧಿಕಾರಿ
ನಗರಪಾಲಿಕೆ, ಮಂಗಳೂರು.

PD-23

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY NELAMANGALA MUNIDALAPPA